ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಯಾವುದೇ ಪಕ್ಷದ ಅಧ್ಯಕ್ಷರಾಗಿರಲಿ, ಸದಸ್ಯರಾಗಿರಲಿ, ಅವರುಗಳು ರಕ್ಷಣೆಯನ್ನು ಕೇಳಿದಾಗ ಕೊಡಬೇಕಾಗಿರುತ್ತದೆ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಯಾರಾದರೂ ಆಗಲೀ ಅಂಥವರ ಮೇಲೆ ಹಲ್ಲೆ ಮಾಡುವುದಕ್ಕೆ ಹೋದರೆ ಯಾವ ಪಕ್ಷದವರೇ ಆಗಲೀ ಅದನ್ನು ನಾನು ಖಂಡಿಸುತ್ತೇನೆ. ಜೊತೆಗೆ ತಾವು ರಕ್ಷಣೆಯನ್ನು ಕೊಡತಕ್ಕಂಥ ವಿಚಾರವನ್ನು ಹೇಳಿದ್ದೀರಿ. ಆದರೆ ಕಾಂಗ್ರೆಸ್ (ಐ) ಪಕ್ಷದವರ ಹೆಸರಿನಲ್ಲಿ ಬೇರೆ ಪಕ್ಷಕ್ಕೆ ಸೇರಿದವರು ಇಂಥ ಕೆಲಸಕ್ಕೆ ಕೈ ಹಾಕಿದರೆ ದಯವಿಟ್ಟು ಅದನ್ನು ತಾವು ತನಿಖೆ ಮಾಡಿಸಿ ಅಂಥವರ ಮೇಲೆ ಕೂಡ ಕ್ರಮ ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ. ಮತ್ತು ನಿರಾಧಾರವಾದ ಸುಳ್ಳು ವಂದತಿಗಳನ್ನು ಅಸತ್ಯವಾದ ವಂದತಿಗಳನ್ನು ಹಬ್ಬಿಸತಕ್ಕಂಥವರ ಮೇಲೆ ಕ್ರಮ ತೆಗೆದುಂಕೊಳ್ಳತಕ್ಕಂಥದ್ದು ಕಾನೂನು ಪ್ರಕಾರ ಇದೆ. ಯಾರೇ ತಪ್ಪು ಮಾಡಿರಲಿ. ಅಂಥವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇರೆಂದು ನಾನು ನಂಬಿದ್ದೇನೆ.

ಶ್ರೀ ಬಿ. ರಾಚಯ್ಯ.—ವಿಚಾರಣೆ ಮಾಡಿಸುತ್ತೇನೆ. ಯಾರೇ ಇರಲೀ ಅಪಪ್ರಚಾರಕ್ಕೊಸ್ಕರ ಮಾತುವುದಿಲ್ಲ, ಮುಖ್ಯವಾಗಿ ಗಣ್ಯ ವ್ಯಕ್ತಿಗಳ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಈ ರೀತಿಯಾದಂಥ ತೊಂದರೆ ಇದ್ದರೆ ಇವರ ಕೆಲಸಕಾರ್ಯಗಳಿಗೆ ಅಡ್ಡಿ ಬರತಕ್ಕಂಥ ರೀತಿಯಲ್ಲಿ, ಅವರ ಪ್ರಾಣಕ್ಕೆ ಅಡ್ಡಿ ಚರತಕ್ಕಂಥ ರೀತಿಯಲ್ಲಿ ಇದ್ದರೆ ಅವರಿಗೆ ರಕ್ಷಣೆ ಕೊಡುತ್ತೇನೆ ಎಂದು ಹೇಳಿದ್ದೇನೆ; ಇದು ಸತ್ಯಕ್ಕೆ ಬೂರವಾಗಿರತಕ್ಕಂಥ ವಿಷಯವೇನೂ ಅಲ್ಲ. ದೊಡ್ಡ ಪತ್ರಿಕೆಯಲ್ಲಿ ಈ ವಿಷಯ ಬಂದಿರುವುದು ಅಲ್ಲದೇ ಕೆಲವರಿಂದ ಟೆಲಿಗ್ರಾಮ್ ಕೂಡ ಬಂದಿದೆ, ಅದನ್ನು ವಿಚಾರ ಮಾಡುತ್ತೇನೆ.

IX. ಶ್ರೀರಾಮಪುರದಲ್ಲಿ ದಿ॥ ಮ. ರಾಮಮೂರ್ತಿಯವರ ನಾಮಫಲಕವನ್ನು ಕೆಲವು ತಮಿಳರು ಅಳಿಸಿರುವುದು.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಶ್ರೀರಾಮಪುರದ ಮುಖ್ಯ ರಸ್ತೆಗೆ ನಗರಸಭೆಯು ವತಿಯಿಂದ ದಿ॥ ಕನ್ನಡದ ಕಾದಂಬರಿ, ಕನ್ನಡ ಸೇನಾನಿ ಮ. ರಾಮಮೂರ್ತಿ. ಎಂದು ನಾಮಕರಣ ಇದ್ದು ಆ ನಾಮಫಲಕದ ಕಲ್ಲಿನ ಮೇಲೆ ಕೆಲವು ತಮಿಳರು ಅಸಹ್ಯಕರವಾಗಿ ಬರೆದು ಅವರ ಹೆಸರನ್ನು ಅಳಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ತಮ್ಮ ಗಮನಕ್ಕೆ ಬರದಿದ್ದರೆ ಇವರ ಮೇಲೆ ಏನು ಕ್ರಮ ಕೈಗೊಂಡಿರುವಿರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗ ತಾನೆ ಮಾನ್ಯ ಸದಸ್ಯರು ಇದನ್ನು ಹೇಳಿದ್ದಾರೆ. ಇದನ್ನು ಈ ಕೂಡಲೇ ಸರಿಪಡಿಸುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ. ಇದು ಶಿವಾಜಿನಗರದಲ್ಲಿಯೂ ಕೂಡ ನಡೆದಿದೆ. ಇದರ ಬಗ್ಗೆ ತಾವು ಕೂಡಲೇ ತೀವ್ರ ಕ್ರಮ ಕೈಗೊಳ್ಳಬೇಕು. ಅವರುಗಳು ನಮ್ಮ ಊರಿಗೆ ಬಂದು ಈ ರೀತಿಯಾದಂಥ ಒಂದು ಅನ್ಯಾಯವನ್ನು ಮಾಡಿದ್ದಾರೆ.

ಅಧ್ಯಕ್ಷರು.—ನಾರಾಯಣಕುಮಾರ್ ತಾವು ದಯವಿಟ್ಟು ಕುಳಿತುಕೊಳ್ಳಿ.

X. ಖಾಸಗೀ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ೬೦% ಖೋಟಾ ಇದ್ದದನ್ನು ಹೈಕೋರ್ಟು ತಳ್ಳಿಹಾಕಿರುವ ಬಗ್ಗೆ.

SRI KEMPEERE GOWDA.—Mr, Speaker, The unfortunate situation arisen due to the decision of Karnataka High Court in setting aside the general order regarding 60% reservation seats quota in private Engineering colleges in the State and the anxiety caused to the parents. Honble Education Minister is requested to make a statement in this behief.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವಂತೆ ಪ್ರತಿ ಹಂತನಾಗಿ ಕ್ಯಾಪಿಟೇಷನ್ ಶುಲ್ಕವನ್ನು ರದ್ದುಮಾಡಬೇಕು, ಎನ್ನುವುದು ಸರ್ಕಾರದ ನೀತಿಯಾಗಿದೆ. ಆ ನೀತಿಗೆ